Udayavani

## ಜೀವ ವೈವಿಧ್ಯ ಕಾನೂನು

# ಗ್ರಾಮ ಮಟ್ಟದಲ್ಲಿಯೇ ಜಾರಿಯಾಗಲಿ: ಸುಗರ

ಮಂಗಳೂರು, ನ. 28: ಸಾವಿರಾರು ವರ್ಷಗಳಿಂದ ಜೀವವೈವಿಧ್ಯ ಮತ್ತು ಅದರ ಸಂಪನ್ಮೂಲವನ್ನು ಮನುಷ್ಯ ಮುಕ್ತವಾಗಿ ಬಳಸಿಕೊಳ್ಳುತ್ತಿದ್ದಾನೆ. ಆದರೆ, ಇಂದು ಸಂಪನ್ಮೂಲಗಳ ಖಾಸಗೀಕರಣ, ತಂತ್ರಜ್ಞಾನ ಮತ್ತು ಬೌದ್ಧಿಕ ಆಸ್ತಿ ಹಕ್ಕಿನಿಂದ ಪರಿಸ್ಥಿತಿ ಬದಲಾವಣೆ ಕಂಡಿದೆ. ಈ ಕುರಿತು ಸಾಕಷ್ಟು ಕಾನೂನು ಬಂದಿದ್ದು, ಇದನ್ನು ಗ್ರಾ. ಪಂ. ಮಟ್ಟದಿಂದ ಜಾರಿಗೆ ತರುವ ವಿಶೇಷ ಪ್ರಯತ್ನ ನಡೆಯಬೇಕು ಎಂದು ಕರ್ನಾಟಕ ಅರಣ್ಯ ಇಲಾಖೆ ಎಪಿಸಿಸಿಎಫ್ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ಡಾ| ಕೆ.ಎಸ್. ಸುಗರ ಹೇಳಿದರು.

ಅರುಣಾಚಲಪ್ರದೇಶ, ಛತ್ತೀಸ್‌ಗಢ ಮತ್ತು ಉತ್ತರಾಖಂಡ ರಾಜ್ಯಗಳ ಪ್ರತಿನಿಧಿಗಳು ಹಾಗೂ ತರಬೇತುದಾರರಿಗೆ ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ದೇಶದಲ್ಲಿ ಜೀವವೈವಿಧ್ಯ ಕಾಯಿದೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಸಮರ್ಪಕವಾಗಿ ಸ್ಪಂದಿಸಬೇಕು ಎಂದು ಅವರು ಹೇಳಿದರು.

ಮಂಗಳೂರು ವೃತ್ತ ಸಿಸಿಎಫ್ ಸಂಜಯ ಬಿಜ್ಜೂರ್ ಮಾತನಾಡಿ, ಕರಾವಳಿ ಭಾಗದಲ್ಲಿ ಜೀವವೈವಿಧ್ಯ ಸಂಪನ್ಮೂಲಕ್ಕೆ ಕೊರತೆ ಸಮಸ್ಯೆ ಎದುರಾಗಿಲ್ಲ, ಆದರೆ ಅದರ ನಿರ್ವಹಣೆ ಸವಾಲಾಗಿ ಕಾಣಿಸುತ್ತಿದೆ. ಈ ಕಾರಣಕ್ಕೆ ವೈಯಕ್ತಿಕವಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಮಂಗಳೂರು ವಿಭಾಗ ಡಿಸಿಎಫ್ ಒ. ಪಾಲಯ್ಯ, ಐಐಎಸ್‌ಸಿ ಸಿಇಎಸ್ ಡಾ| ಸುಭಾಷ್ ಚಂದ್ರನ್ ಉಪಸ್ಥಿತರಿದ್ದರು. ಎಫ್‌ಆರ್‌ಎಲ್‌ಎಚ್‌ಟಿ ಹಿರಿಯ ಕಾರ್ಯಕ್ರಮ ಅಧಿಕಾರಿ ಆರ್. ಜಗನ್ನಾಥ ರಾವ್ ಸ್ವಾಗತಿಸಿದರು.

ಭಾರತದ ಮೂರು ರಾಜ್ಯಗಳಲ್ಲಿ ವೈದ್ಯಕೀಯ ಸಸ್ಯಗಳ ಸಂರಕ್ಷಣೆ ಮತ್ತು ಸುಸ್ಥಿರ ನಿರ್ವಹಣೆ ಕುರಿತು ಪರಿಸರ ಮತ್ತು ಅರಣ್ಯ ಸಚಿವಾಲಯ, ಜಿಇಎಫ್ ಮತ್ತು ಯುಎನ್‌ಡಿಪಿಗಳ ಆಶ್ರಯದಲ್ಲಿ ಹಮ್ಮಿಕೊಳ್ಳುವ ಯೋಜನೆ ಅಂಗವಾಗಿ ಈ ಶಿಬಿರ ಆಯೋಜಿಸಲಾಗುತ್ತಿದೆ. ಜೈವಿಕ ಸಂಪನ್ಮೂಲ, ಸಾಂಪ್ರದಾಯಿಕ ಜ್ಞಾನ ಮತ್ತು ಈ ಜ್ಞಾನ ಹೊಂದಿರುವವರ ಬೌದ್ಧಿಕ ಸಂಪತ್ತಿನ ಸಂರಕ್ಷಣೆ ಮಾಡಲಾಗುತ್ತಿದೆ. ಜೀವ ವೈವಿಧ್ಯ ಕಾಯಿದೆ, ಸಾಂಪ್ರದಾಯಿಕ ಜ್ಞಾನದ ದಾಖಲೀಕರಣ ಮತ್ತು ಜನರ ಜೀವ ವೈವಿಧ್ಯ ನೋಂದಣಿ (ಪಿಬಿಆರ್) ಸಿದ್ಧತೆಯಲ್ಲಿ ತೊಡಗಿರುವ ಸಂಘ ಸಂಸ್ಥೆಗಳಿಗೆ ಯೋಜನೆ ಕುರಿತು ಅರಿವು ಮೂಡಿಸುವುದು ಯೋಜನೆ ಉದ್ದೇಶ.

Kannada Prabha

# ಶಾಲೆ ವಿದ್ಯಾರ್ಥಿಗಳು ಜೀವ ವೈವಿಧ್ಯ ಸಮೀಕ್ಷೆ ಮಾಡಲಿ: ಸುಭಾಶ್ಚಂದ್ರನ್




ಮಂಗಳೂರು: ಯಾವುದೇ ಸಮೀಕ್ಷೆಗಳಿಗೆ ಸರ್ಕಾರಿ ಅಧಿಕಾರಿಗಳನ್ನು ಮನೆಗೆ ಕಳುಹಿಸಿದರೆ ಜನ ಸರಿಯಾಗಿ ಪ್ರತಿಕ್ರಿಯಿಸುವುದಿಲ್ಲ. ಆದ್ದರಿಂದ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ವಿದ್ಯಾರ್ಥಿಗಳ ಮೂಲಕ ಜೀವ ವೈವಿಧ್ಯ ಸಮೀಕ್ಷೆ ನಡೆಸಬೇಕು ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ತಜ್ಞ ಡಾ.ಸುಭಾಷ್‌ಚಂದ್ರನ್ ಹೇಳಿದರು.

ದೇಶದಲ್ಲಿ ಜೀವವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗೆ ಅರುಣಾಚಲ ಪ್ರದೇಶ, ಛತ್ತೀಸ್‌ಗಢ ಮತ್ತು ಉತ್ತರಾಖಂಡ ಜೀವ ವೈವಿಧ್ಯ ನಿರ್ವಹಣೆ ಸಮಿತಿಯ ನೂರು ಪ್ರತಿನಿಧಿಗಳಿಗೆ ಗೋಲ್ಡ್ ಫಿಂಚ್‌ನಲ್ಲಿ ಗುರುವಾರ ತರಬೇತಿ ನೀಡಿ ಮಾತನಾಡಿದರು.

ಜೀವ, ಆಹಾರ ಬೆಳೆ ವೈವಿಧ್ಯದಲ್ಲಿ ಭಾರತ ವಿಶ್ವದಲ್ಲಿಯೇ 7ನೇ ಸ್ಥಾನದಲ್ಲಿದೆ. ಜೀವ ವೈವಿಧ್ಯ ಕಾಯ್ದೆ ಬಂದು 10 ವರ್ಷ ಕಳೆದರೂ ದಾಖಲೀಕರಣ ಸರಿಯಾಗಿ ನಡೆಯುತ್ತಿಲ್ಲ. ರಾಜ್ಯದಲ್ಲಿ 5,268 ಗ್ರಾಮಗಳಿದ್ದರೂ ಕೇವಲ 267 ಗ್ರಾಮಗಳಲ್ಲಿ ಮಾತ್ರ ದಾಖಲೀಕರಣ ನಡೆಯುತ್ತಿದೆ. ಕೇರಳದ 978 ಗ್ರಾಮಗಳಲ್ಲಿ 670 ಗ್ರಾಮಗಳು ಜೀವ ವೈವಿಧ್ಯ ದಾಖಲಿಸುತ್ತಿದ್ದು, ಮುಂಚೂಣಿಯಲ್ಲಿದೆ ಎಂದರು.

ಗ್ರಾಮಗಳಲ್ಲಿ ಯುವಕ ಮಂಡಲ, ಶಾಲೆ ಮಕ್ಕಳ ಸಹಯೋಗ ಪಡೆಯಬೇಕು. ಅಲ್ಲಿ ನಾಟಿ ವೈದ್ಯರಲ್ಲಿ ಸಂದರ್ಶನ ಮಾಡಿದಾಗ ಅವರ ಔಷಧೀಯ ಸಸ್ಯಗಳ ಬಗ್ಗೆ ಮಾಹಿತಿ ನೀಡುತ್ತಾರೆ, ಅದನ್ನು ದಾಖಲಿಸಿಕೊಳ್ಳಬೇಕು. ಚಿರತೆ, ಹುಲಿ, ಮೊಸಳೆ ಇರುವ ಬಗ್ಗೆ ವಿಚಾರಿಸಬೇಕು. ಗಣಿಗಾರಿಕೆ, ಬೇಟೆ ಮಾಡುತ್ತಿದ್ದರೆ ತಿಳಿಯಬೇಕು. ಸೌರ ವಿದ್ಯುತ್ ಬಳಕೆ, ಅಲ್ಲಿನ ಮಾರುಕಟ್ಟೆ ವ್ಯವಸ್ಥೆ ವಿವರ ಪಡೆಯಬೇಕು ಎಂದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ಡಾ.ಕೆ.ಎಸ್. ಸುಗರ ಆಶಯ ಭಾಷಣ ಮಾಡಿದರು. ಮಂಗಳೂರು ವೃತ್ತದ ಸಿಸಿಎಫ್ ಸಂಜಯ ಬಿಜ್ಜೂರು, ಡಿಸಿಎಫ್ ಪಾಲಯ್ಯ, ಮತ್ತು ಪಿಲಿಕುಳ ನಿಸರ್ಗಧಾಮ ತರಬೇತಿ ವಿಭಾಗದ ನಿರ್ದೇಶಕ ಡಾ.ಕೆ.ವಿ.ರಾವ್ ಭಾಗವಹಿಸಿದರು.

ಮೂರು ರಾಜ್ಯಗಳಲ್ಲಿ ಸಸ್ಯಗಳ ಸಂರಕ್ಷಣೆ ಮತ್ತು ಸುಸ್ಥಿರ ನಿರ್ವಹಣೆ ಕುರಿತು ಪರಿಸರ, ಅರಣ್ಯ ಸಚಿವಾಲಯ, ಜಿಇಎಫ್ ಮತ್ತು ಯುಎನ್‌ಡಿಪಿ ಕಾರ್ಯಕ್ರಮ ಆಯೋಜಿಸಿದೆ.

ಶುಕ್ರವಾರ ಉತ್ತರ ಕನ್ನಡ ಹೊನ್ನಾವರದಲ್ಲಿ ಬಿಎಂಸಿಗಳು ಯಶಸ್ವಿಯಾಗಿ ಕೈಗೊಂಡ ಕಾರ್ಯಕ್ರಮಗಳನ್ನು ವೀಕ್ಷಿಸಲು ಪ್ರತಿನಿಧಿಗಳು ಹೊನ್ನಾವರಕ್ಕೆ ತೆರಳಲಿದ್ದಾರೆ.

Vijaya Karnataka

# ಜೀವ ವೈವಿಧ್ಯ ರಕ್ಷಣೆ ಮಾನವ ಧರ್ಮ

■ **ವಿಕ ಸುದ್ದಿಲೋಕ** ಮಂಗಳೂರು

ದೇಶದಲ್ಲಿ ಜೀವವೈವಿಧ್ಯ ಕಾಯಿದೆ ಹಾಗೂ ನಿಯಮಗಳ ಸೌಹಾರ್ದ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಪೂರಕವಾಗಿ ಕೆಲಸ ಮಾಡಬೇಕು ಎಂದು ಕರ್ನಾಟಕ ಅರಣ್ಯ ಇಲಾಖೆ ಎಪಿಸಿಸಿಎಫ್ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ಡಾ.ಕೆ.ಎಸ್. ಸುಗರ ಹೇಳಿದರು.

ನಗರದ ಹೋಟೆಲ್ ಗೋಲ್ಡ್‌ಫಿಂಚ್ ಸಭಾಂಗಣದಲ್ಲಿ ಗುರುವಾರ ಅರುಣಾಚಲಪ್ರದೇಶ, ಛತ್ತೀಸ್‌ಗಢ ಮತ್ತು ಉತ್ತರಖಂಡ ರಾಜ್ಯಗಳ ಪ್ರತಿನಿಧಿಗಳು/ ತರಬೇತುದಾರರಿಗೆ ಆಯೋಜಿಸಿದ್ದ ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಕಾರ್ಯಾಗಾರದಲ್ಲಿ ಆಶಯ ಭಾಷಣ ಮಾಡಿದರು.

**ದೊಡ್ಡ ಸುದ್ದಿ**

ಜೀವ ವೈವಿಧ್ಯತೆ ಸಂರಕ್ಷಣೆ ಮಾನವನ ಶಾಶ್ವತೀಕ ಧರ್ಮ. ಮನುಷ್ಯ ಸಾವಿರಾರು ವರ್ಷಗಳಿಂದ ಜೀವ ವೈವಿಧ್ಯ ಮತ್ತು ಅದರ ಸಂಪನ್ಮೂಲವನ್ನು ಮುಕ್ತವಾಗಿ ಬಳಸಿಕೊಳ್ಳುತ್ತಿದ್ದಾನೆ. ಆದರೆ, ಇಂದು ಸಂಪನ್ಮೂಲಗಳ ಖಾಸಗೀಕರಣ, ತಂತ್ರಜ್ಞಾನ ಮತ್ತು ಬೌದ್ಧಿಕ ಆಸ್ತಿ ಹಕ್ಕಿನಿಂದಾಗಿ ಪರಿಸ್ಥಿತಿ ಬದಲಾಗಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಕಾನೂನುಗಳು ಬಂದಿದ್ದು, ಇದನ್ನು ಗ್ರಾಮ ಪಂಚಾಯಿತಿ ಮಟ್ಟದಿಂದ ಜಾರಿಗೆ ಬರಬೇಕು. ಕಾನೂನು ಜಾರಿಗೆ ಜನರ ಸಹಭಾಗಿತ್ವ ಅತೀ ಮುಖ್ಯ ಎಂದು ಅವರು ಹೇಳಿದರು.

ಮಂಗಳೂರು ವೃತ್ತ ಸಿಸಿಎಫ್ ಸಂಜಯ ಬಿಜ್ಜೂರ್ ಮಾತನಾಡಿ, ನಮ್ಮಲ್ಲಿ ಜೀವ ವೈವಿಧ್ಯ ಸಂಪನ್ಮೂಲಕ್ಕೆ ಕೊರತೆ ಇಲ್ಲ, ಅದರ ನಿರ್ವಹಣೆ ಸವಾಲಾಗಿದೆ. ಸುಸ್ಥಿರ ಅಭಿವೃದ್ಧಿಗೆ ವೈಯಕ್ತಿಕವಾಗಿ ಪ್ರತಿಯೊಬ್ಬರೂ ಕೈಜೋಡಿಸುವಂತೆ ಮಾಡಬೇಕು ಎಂದರು. ಮಂಗಳೂರು ವಿಭಾಗ ಡಿಸಿಎಫ್ ಓ.ಪಾಲಯ್ಯ, ಐಐಎಸ್‌ಸಿ ಸಿಇಎಸ್ ಡಾ.ಸುಭಾಷ್ ಚಂದ್ರನ್ ಉಪಸ್ಥಿತರಿದ್ದರು. ಎಫ್‌ಆರ್‌ಎಲ್‌ಎಚ್‌ಟಿ ಹಿರಿಯ ಕಾರ್ಯಕ್ರಮ ಅಧಿಕಾರಿ ಆರ್.ಜಗನ್ನಾಥ ರಾವ್ ಸ್ವಾಗತಿಸಿದರು.




ಮಂಗಳೂರಿನಲ್ಲಿ ಗುರುವಾರ ಅರುಣಾಚಲಪ್ರದೇಶ, ಛತ್ತೀಸ್‌ಗಢ ಮತ್ತು ಉತ್ತರಖಂಡ ರಾಜ್ಯಗಳ ಪ್ರತಿನಿಧಿಗಳು/ ತರಬೇತುದಾರರಿಗೆ ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆ ಕಾರ್ಯಾಗಾರ ನಡೆಯಿತು.

## ವೈದ್ಯಕೀಯ ಸಸ್ಯಗಳ ರಕ್ಷಣೆಗಾಗಿ...

ಭಾರತದ ಮೂರು ರಾಜ್ಯಗಳಲ್ಲಿ ವೈದ್ಯಕೀಯ ಸಸ್ಯಗಳ ಸಂರಕ್ಷಣೆ ಮತ್ತು ಸುಸ್ಥಿರ ನಿರ್ವಹಣೆ ಕುರಿತು ಪರಿಸರ ಮತ್ತು ಅರಣ್ಯ ಸಚಿವಾಲಯ, ಜಿಇಎಫ್ ಮತ್ತು ಯುಎನ್ ಡಿಪಿಗಳ ಆಶ್ರಯದಲ್ಲಿ ನಡೆಯುತ್ತಿರುವ ಯೋಜನೆ ಅಂಗವಾಗಿ ಈ ಶಿಬಿರ ಆಯೋಜಿಸಲಾಗಿದೆ.

ಯೋಜನೆ ಮೂಲಕ ವೈವಿಕ ಸಂಪನ್ಮೂಲ, ಸಾಂಪ್ರದಾಯಿಕ ಜ್ಞಾನ ಮತ್ತು ಈ ಜ್ಞಾನ ಹೊಂದಿರುವವರ ಬೌದ್ಧಿಕ ಸಂಪತ್ತಿನ ಸಂರಕ್ಷಣೆ ಮಾಡಲಾಗುತ್ತಿದೆ. ಜೀವ ವೈವಿಧ್ಯ ಕಾಯಿದೆ, ಸಾಂಪ್ರದಾಯಿಕ ಜ್ಞಾನದ ದಾಖಲೀಕರಣ ಮತ್ತು ಜನರ ಜೀವ ವೈವಿಧ್ಯ ನೋಂದಣಿ(ಪಿಬಿಆರ್) ಸಿದ್ಧತೆಯಲ್ಲಿ ತೊಡಗಿರುವ ಸಂಘ ಸಂಸ್ಥೆಗಳಿಗೆ ಯೋಜನೆ ಕುರಿತು ಅರಿವು ಮೂಡಿಸುವುದು ಯೋಜನೆ ಉದ್ದೇಶ.

ಜ್ಞಾನದ ವಿನಿಮಯದ ಲಾಭ ಮತ್ತು ಹಂಚಿಕೆಗೆ ದೇಖಲ ನೀಡಲು ಬಯೋ ಕಲ್ಚರಲ್ ಪ್ರೋಟೋಕಾಲ್ ಸಮುದಾಯ(ಬಿಸಿಪಿ) ಸಿದ್ಧಪಡಿಸಲಾಗಿದೆ. ಇದಲ್ಲದೇ, ಅರುಣಾಚಲ ಪ್ರದೇಶ, ಛತ್ತೀಸ್‌ಗಢ ಮತ್ತು ಉತ್ತರಖಂಡ ರಾಜ್ಯಗಳಲ್ಲಿರುವ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಮತ್ತು ಅವುಗಳ ಕಾರ್ಯ ಚಟುವಟಿಕೆಗಳಿಗೆ ಶಕ್ತಿ ತುಂಬುವ ಉದ್ದೇಶವನ್ನೂ ಯೋಜನೆ ಹೊಂದಿದೆ.

Hosa Digantha

### ಜೀವ ವೈವಿಧ್ಯ ಸಂರಕ್ಷಣೆ, ಸುಸ್ಥಿರ ನಿರ್ವಹಣೆ

# ಸಮಾನ ಪಾಲ್ಗೊಳ್ಳುವಿಕೆ ಬೇಕು: ಡಾ.ಸುಗರ

ಮಂಗಳೂರು: ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರತೆಗೆ ಘನತೆಯಿಂದ ಕೂಡಿದ ನೀತಿ ಮತ್ತು ಕಾಯ್ದೆಯ ಅವಶ್ಯಕತೆ ಇದೆ ಎಂದು ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿ ಡಾ.ಕೆ.ಎಸ್.ಸುಗರ ಹೇಳಿದ್ದಾರೆ.

ಅವರು ಅರುಣಾಚಲ ಪ್ರದೇಶ, ಛತ್ತೀಸ್‌ಘಡ ಮತ್ತು ಉತ್ತರಾಖಂಡ ರಾಜ್ಯಗಳ ಪ್ರತಿನಿಧಿಗಳು ಮತ್ತು ತರಬೇತುದಾರರಿಗೆ ನಗರದಲ್ಲಿ ಗುರುವಾರ ಹಮ್ಮಿಕೊಂಡ ಮೂರು ದಿನಗಳ ಕಾರ್ಯಾಗಾರದಲ್ಲಿ ಪಾಲ್ಗೊಂಡು ಆಶಯ ಭಾಷಣ ಮಾಡಿದರು.

ಜೀವ ವೈವಿಧ್ಯ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಯಲ್ಲಿ ಸರಕಾರ ಮತ್ತು ಸರಕಾರೇತರರೆಲ್ಲರೂ ಸಮಾನವಾಗಿ ಮತ್ತು ಸೌಹಾರ್ದತೆಯಲ್ಲಿ ಪಾಲ್ಗೊಳ್ಳಬೇಕು ಎಂಬುದನ್ನು ಡಾ.ಸುಗರ ಒತ್ತಿ ಹೇಳಿದರಲ್ಲದೆ ಹೀಗಾದಲ್ಲಿ ಸಮಾಜಕ್ಕೆ ಹೆಚ್ಚು ಲಾಭವಾಗಲಿದೆ ಎಂದರು.

ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳು ನೀತಿ ಮತ್ತು ಕಾಯ್ದೆಗಳ ಅರಿವು ಹೊಂದಿರುವ ಜತೆಗೆ ಜೀವವೈವಿಧ್ಯತೆಯ ವಿಶೇಷತೆ ಮತ್ತು ಮಹತ್ವವನ್ನು ತಿಳಿದು ಕೊಳ್ಳಬೇಕು. ಸ್ಥಳೀಯವಾಗಿ ಅವುಗಳನ್ನು ಸಂರಕ್ಷಿಸುವ ಮತ್ತು ಅದನ್ನು ರಾಷ್ಟ್ರದ ಸಂಪನ್ಮೂಲವಾಗಿ ಬೆಳಗುವ ಉತ್ಕಟೇಚ್ಛೆಯನ್ನು ಹೊಂದಿರಬೇಕು ಎಂದು ಅವರು ಅಭಿಪ್ರಾಯ ಪಟ್ಟರು.




ನಿಜ ಅರ್ಥದ ಆಸಕ್ತರನ್ನು ಮಾತ್ರ ಗ್ರಾಮ ಮಟ್ಟದ ಸಮಿತಿಗಳಲ್ಲಿ ಸದಸ್ಯರನ್ನಾಗಿ ಮಾಡುವ ಮೂಲಕ ಸಮಿತಿಗೆ ಹೆಚ್ಚು ಬಲ ತುಂಬ ಬಹುದು. ಇಂತಹ ಸಮಿತಿಗಳು ಜೀವ ವೈವಿಧ್ಯ ಕುರಿತ ಸಂಕೀರ್ಣ ಸಮಸ್ಯೆಗಳನ್ನು ಸುಲಲಿತವಾಗಿ ನಿರ್ವಹಿಸುವವು ಎಂದು ಡಾ.ಸುಗರ ನುಡಿದರು.

ಮಂಗಳೂರು ವೃತ್ತದ ಸಿಸಿಎಫ್ ಸಂಜಯ ಬಿಜ್ಜೂರು, ಮಂಗಳೂರು ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಓ.ಪಾಲಯ್ಯ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್‌ನ ಡಾ.ಸುಭಾಶ್ಚಂದ್ರನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಎಫ್‌ಆರ್‌ಎಲ್‌ಎಚ್‌ಟಿಯ ಹಿರಿಯ ಕಾರ್ಯಕ್ರಮ ಅಧಿಕಾರಿ ಆರ್.ಜಗನ್ನಾಥ ರಾವ್ ಸ್ವಾಗತಿಸಿದರು. ಮೂರು ರಾಜ್ಯಗಳ ಔಷಧೀಯ ಸಸ್ಯಗಳ ಸಂರಕ್ಷಣೆ ಮತ್ತು ಸುಸ್ಥಿರ ನಿರ್ವಹಣೆ ಕುರಿತ ಈ ಕಾರ್ಯಾಗಾರವನ್ನು ಪರಿಸರ ಮತ್ತು ಅರಣ್ಯ ಸಚಿವಾಲಯ, ಜಿಇಎಫ್ ಹಾಗೂ ಯುಎನ್‌ಡಿಪಿಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ. ಮೂರು ರಾಜ್ಯಗಳ ಪ್ರತಿನಿಧಿಗಳು ಮತ್ತು ತರಬೇತುದಾರರು ಕಾಸರಗೋಡು, ಬೆಳ್ತಂಗಡಿ ಮತ್ತು ಪಿಲಿಕುಳ ನಿಸರ್ಗಧಾಮಗಳಿಗೆ ತೆರಳಿ ಕ್ಷೇತ್ರ ಸಂದರ್ಶನದ ಮೂಲಕವೂ ಅನುಭವ ಪಡೆಯಲಿದ್ದಾರೆ.